25

# “ನಾನು ನಿನ್ನನ್ನು ಪ್ರೀತಿಸುತ್ತೇನೆ” ಎಂದು ದೇವರಿಗೆ ನೀನು ಹೇಗೆ ಹೇಳುತ್ತೀ?

## (12:1-8)

ಯಾರಿಗಾದರೂ “ನಾನು ನಿನ್ನನ್ನು ಪ್ರೀತಿಸುತ್ತೇನೆ” ಎಂದು ನೀನು ಹೇಗೆ ಹೇಳುವಿ? ಇತರರಿಗಾಗಿ ನಮ್ಮ ಪ್ರೀತಿಯನ್ನು ಹೇಗೆ ತಿಳಿಸಬೇಕೆಂದು ನಾವೆಲ್ಲರೂ ಹೋರಾಡುತ್ತೇವೆ. ನಾನು ಐದು ವರ್ಷ ವಯಸ್ಸಿನವನಾಗಿದ್ದಾಗ ನನ್ನ ಸೆಂಡೇ ಸ್ಕೂಲ್ ಕ್ಲಾಸಿನಲ್ಲಿದ್ದ ಕೇಟ ಎಂಬ ಚಿಕ್ಕ ಬಾಲಕಿಯೊಂದಿಗೆ ನಾನು ಆಳವಾದ ಪ್ರೀತಿಯಲ್ಲಿ ಇದ್ದ ಸಮಯದ ಬಗ್ಗೆ ನನ್ನ ತಂದೆ ತಾಯಿಗಳು ನನಗೆ ಹೇಳಿದರು. ಒಂದು ರಾತ್ರಿ ನಾವು ಚರ್ಚಿನಿಂದ ಮನೆಗೆ ಕಾರಿನಲ್ಲಿ ಹೋಗುತ್ತಿದ್ದಾಗ, ನಾನು ಮುಂದಿನ ಆಸನಕ್ಕೆ ಒರಗಿಕೊಂಡು ನನ್ನ ತಂದೆಗೆ, “ಅಪ್ಪಾ, ನೀನು ಪ್ರೀತಿಯಲ್ಲಿರುವಾಗ ನೀನು ಏನು ಮಾಡುತ್ತೀ?” ಎಂದು ಕೇಳಿದೆನು. ಅವನ ಉತ್ತರವು ಸರಳವಾದದ್ದು ಮತ್ತು ಬಾಲಕನಿಗೆ ಅರ್ಥಕೊಡುವಂಥದ್ದೂ ಆಗಿತ್ತು. “ಮಗನೇ, ಬಾಲಕಿಗೆ ಒಂದು ಉಂಗುರವನ್ನು ನೀನು ಕೊಂಡುಕೊಳ್ಳುವಿ ಎಂದು ನಾನು ಊಹಿಸುತ್ತೇನೆ” ಎಂದು ಅವನು ಹೇಳಿದನು. ಅನಂತರ ಆ ವಾರದಲ್ಲಿ ನನ್ನ ತಂದೆ ತಾಯಿಗಳು ಒಂದು ಅಂಗಡಿಗೆ ನನ್ನನ್ನು ಕರೆದುಕೊಂಡು ಹೋದರು ಮತ್ತು ನಾವು ಅದನ್ನೇ ಮಾಡಿದೆವು: ಕೇಟಗಾಗಿ ಒಂದು ಆಟದ ಉಂಗುರವನ್ನು ಕೊಂಡು ಕೊಂಡು ಮುಂದಿನ ಸಲ ಆಕೆಯನ್ನು ನೋಡಿದಾಗ ಆಕೆಗೆ ಕೊಟ್ಟೆನು.

ಯಾರಿಗಾದರೂ “ನಿನ್ನನ್ನು ನಾನು ಪ್ರೀತಿಸುತ್ತೇನೆ” ಎಂದು ನೀನು ಹೇಗೆ ಹೇಳುವಿ? ಒಂದು ಸಲ ಕಾಲೇಜಿನ ವಿದ್ಯಾರ್ಥಿಗಳಿಗೆ ನನ್ನ ಬುಧವಾರದ ರಾತ್ರಿಯ ಬೈಬಲ್ ಅಧ್ಯಯನದಲ್ಲಿ ಅವರು ಪ್ರೀತಿಯು ವ್ಯಕ್ತಪಡಿಸುವನ್ನು ಹೇಗೆ ನೋಡಿರುವರು ಎಂದು ಕೇಳಿದೆನು. ಕೇವಲ ವಾರದ ಮೊದಲು ಮದುವೆಯಾಗಲು ಒಂದು ಜೋಡಿಯು ನಿಶ್ಚಯಮಾಡಿಕೊಂಡಿತ್ತು. ಅವನು ತನ್ನ ಅತ್ಯುತ್ತಮ ಉಡುಪನ್ನು ಧರಿಸಿಕೊಂಡು ಆಕೆಯು ಬಾಲಕಿಯರ ಒಂದು ದೊಡ್ಡ ಗುಂಪಿನಲ್ಲಿದ್ದಾಗ, ಅನಿರೀಕ್ಷಿತ ವಾಗಿ ತನ್ನ ಪ್ರಶ್ನೆಯನ್ನು ಕೇಳಿದ್ದರ ಬಗ್ಗೆ ಅವರು ತಮ್ಮ ಕಥೆಯನ್ನು ಹಂಚಿಕೊಂಡರು. ಅಲ್ಲಿ ಎಲ್ಲರ ಮುಂದೆ, ಅವನು ಆಕೆಯ ಕೈಯನ್ನು ತೆಗೆದುಕೊಂಡು ಆಕೆಯ ಮುಂದೆ ಮೊಣಕಾಲೂರಿ, ತನ್ನನ್ನು ಮದುವೆಯಾಗಬೇಕೆಂದು ಆಕೆಯನ್ನು ಕೇಳಿಕೊಂಡನು! (ಆಕೆ “ಆಗಲಿ” ಎಂದು ಹೇಳಿದಳು!)

ಅನೇಕ ಕಾಲೇಜ್ ವಿದ್ಯಾರ್ಥಿಗಳು ತಮಗಾಗಿ ಯಾರಾದರೊಬ್ಬರ ಪ್ರೀತಿಯನ್ನು ತಿಳಿಸುವ ವಿಶೇಷ ಕಾರ್ಡುಗಳನ್ನೂ ಪತ್ರಗಳನ್ನೂ ಸ್ವೀಕರಿಸಿರುತ್ತಾರೆ. ಒಬ್ಬ ಬಾಲಕಿಯು ತನ್ನ ತಂದೆಯು ತನ್ನ ತಾಯಿಗೆ ಪ್ರತ್ಯೇಕವಾದ ಕಷ್ಟಕರವಾದ ವಾರವಿದ್ದಾಗಲೆಲ್ಲಾ ಆಕೆಗೆ ತನ್ನ ಪ್ರೀತಿಯನ್ನು ತೋರಿಸಲು ಮಾಡುತ್ತಿದ್ದುದರ ಬಗ್ಗೆ ಕೆಲವೊಂದನ್ನು ಜ್ಞಾಪಿಸಿಕೊಂಡಳು. ಏನನ್ನೂ ಹೇಳದೇ ಅವನು ರಹಸ್ಯವಾಗಿ ಮನೆಯನ್ನು ಸ್ವಚ್ಛ ಮಾಡುತ್ತಿದ್ದನು, ಹೀಗೆ ಅವನು ಕಾರ್ಯನಿರತಳಾದ ತನ್ನ ಹೆಂಡತಿಯ ಕೆಲವೊಂದು ಭಾರವನ್ನು ತೆಗೆದುಕೊಳ್ಳುತ್ತಿದ್ದನು. ಇನ್ನೊಬ್ಬ ವಿದ್ಯಾರ್ಥಿಯು ತನ್ನ ತಾಯಿಯು ಯಾವಾಗಲೂ ತನ್ನ ಮಗಳ ಶಾಲೆಯಲ್ಲಿಯ ಊಟಕ್ಕಾಗಿದ್ದ ಬಾಕ್ಸಿನಲ್ಲಿ ಬಾಳೇ ಹಣ್ಣುಗಳ ಮೇಲೆ ಮೃದುವಾದ ಟಿಪ್ಪಣೆಗಳನ್ನು ಬರೆದು ಇಡುತ್ತಿದ್ದುದರ ಬಗ್ಗೆ ಹಂಚಿಕೊಂಡಳು.

ಒಬ್ಬ ಯುವಕನು ತನ್ನನ್ನು ಬೇಸಿಗೆಕಾಲದ ಮಿಶನ್ ಟ್ರಿಪ್ಪಿಗೆ ಕಳುಹಿಸಲು ತನ್ನ ಅಜ್ಜಿ ಕೈ ಕೆಲಸಗಳನ್ನು ಮಾರಿ ಹಣ ಕೂಡಿಸುತ್ತಿದ್ದರ ಬಗ್ಗೆ ಹೇಳಿದನು. ಇನ್ನೊಬ್ಬ ವಿದ್ಯಾರ್ಥಿನಿಯು ತನ್ನ ತಂದೆಯು ತನ್ನ ಮಗಳ ಒಂದು ಸೆಮಿಸ್ಟರದ ಕಾಲೇಜ್ ಪುಸ್ತಕಗಳನ್ನು ಕೊಂಡುಕೊಳ್ಳುವ ತನ್ನ ಬೆಲೆಯುಳ್ಳ ಶೊಟ್‌ಗನ್ನನ್ನು ಮಾರಿದ್ದನ್ನು ವಿವರಿಸಿದಳು.

"ನಾನು ನಿನ್ನನ್ನು ಪ್ರೀತಿಸುತ್ತೇನೆ" ಎಂದು ಹೇಳಲು ಜನರಿರುವಷ್ಟೇ ಹಾಗೆ ಹೇಳಲು ಅನೇಕ ಮಾರ್ಗಗಳಿರುವಷ್ಟು ಆದರೆ "ನಾನು ನಿನ್ನನ್ನು ಪ್ರೀತಿಸುತ್ತೇನೆ" ಎಂದು ದೇವರಿಗೆ ನೀನು ಹೇಗೆ ಹೇಳುವಿ? ಎಂಬುದು ಹೆಚ್ಚು ಮಹತ್ವದ್ದಾಗಿದೆ. ಅದು ನಿರ್ಣಯಾತ್ಮಕವಾದ ಪ್ರಶ್ನೆಯಾಗಿದೆ ಮತ್ತು ನಮ್ಮ ವಾಕ್ಯಭಾಗದಲ್ಲಿ 12:1-8ರಲ್ಲಿ ಮರಿಯಳಿಂದ ಉತ್ತರಿಸಲ್ಪಟ್ಟಿದೆಯೆಂದು ನಾನು ನಂಬುತ್ತೇನೆ.

## ಮರಿಯ ಕಾಣಿಕೆ

ನಮ್ಮ ಕಥೆಯಲ್ಲಿಯ ಘಟನೆಗಳು ಯೆಹೂದ್ಯರ ಪಸ್ಕ ಹಬ್ಬಕ್ಕಿಂತ ಆರು ದಿನಗಳ ಮೊದಲು ಪ್ರಾರಂಭವಾದವು. ಹೀಗೆ ಈ ಘಟನೆಗಳು ಯೇಸುವಿನ ಜೀವನದ ಕೊನೆಯ ವಾರ ದೊಳಗೆ ಇಡಲ್ಪಟ್ಟಿವೆ. ಎಲ್ಲಾ ನಾಲ್ಕು ಸುವಾರ್ತೆಗಳು ಯೇಸುವು ಕೊನೆಯ ಸಮಯಕ್ಕಾಗಿ ಗಲಿಲಾಯವನ್ನು ಬಿಟ್ಟನು ಮತ್ತು ದಕ್ಷಿಣಕ್ಕೆ ಯೆರೂಸಲೇಮಿನ ಕಡೆಗೆ ಹೊರಟನು ಎಂದು ಹೇಳುತ್ತವೆ. ಈ ಹಂತದಲ್ಲಿ ಆತನು ಆಗಲೇ ಜಕ್ಕಾಯನನ್ನು ಸಂದರ್ಶಿಸಿದ್ದ ಯೆರಿಕೋ ವಿನ ಮುಖಾಂತರ ದಾಟಿ ಹೋಗಿದ್ದನು (ಲೂಕ 19:1-10). ಇದು ಗಂಡಾಂತರಕಾರಿಯಾದ ಪ್ರಯಾಣವೆಂದು ಪ್ರತಿಯೊಬ್ಬರೂ ತಿಳಿದಿದ್ದರು (11:8). ಮತ್ತು ಯೇಸುವು ತಾನು ಸಾಯುವದಕ್ಕಾಗಿ ಯೆರೂಸಲೇಮಿಗೆ ಹೋಗುತ್ತಿರುವೆನೆಂದು ಅರಿತವನಾಗಿದ್ದನು.

ಮರಿಯಳು, ಮಾರ್ಥಳು ಮತ್ತು ಲಾಜರನ ಊರಾದ ಬೇಥಾನ್ಯಕ್ಕೆ ಯೇಸುವು ಬಂದನು. ಈ ಸಂದರ್ಭದಲ್ಲಿ ಆತನು ತನ್ನ ಗೌರವಾರ್ಥವಾಗಿ ಕೊಡಲ್ಪಟ್ಟ ಔತಣದಲ್ಲಿ ಆತನು ಭಾಗಿಯಾಗಿದ್ದನು.[1] ಅಥಿತಿಗಳಿಂದ ಲಾಜರನು ಇದ್ದನೆಂದು ನಮಗೆ ಹೇಳಲ್ಪಟ್ಟಿದೆ. ಈ ಔತಣಕ್ಕಾಗಿ ಅತಿಥಿಗಳ ಯಾದಿಯನ್ನು ಕಲ್ಪಿಸಿಕೊಳ್ಳಿರಿ. "ಸತ್ತವರೊಳಗಿಂದ ಎಬ್ಬಿಸಲ್ಪಟ್ಟ ಲಾಜರ" ಮತ್ತು "ಕುಷ್ಠರೋಗಿಯಾದ ಸಿಮೋನ" ಅದರಲ್ಲಿ ಒಳಗೊಂಡಿದ್ದರು. ಬಹಶಃ "ಕುರುಡನಾದ ಯಾಕೋಬ" ಇಲ್ಲವೇ "ಕುಂಟನಾದ ಯೆಹೋಶುವ" ಅವರೂ ಸಹ ಭಾಗವಹಿಸಿದ್ದಿರಬೇಕು. ಔತಣದಲ್ಲಿದ್ದ ಪ್ರತಿಯೊಬ್ಬರಿಗೆ ಯೇಸುವು ತಮ್ಮ ಜೀವಿತವನ್ನು ಹೇಗೆ ಬದಲಾಯಿಸಿದನೆಂಬುದರ ಬಗ್ಗೆ ಹೇಳಲು ಕಥೆಗಳಿದ್ದವು. ಕಠಿಣವಾಗಿ ಕೆಲಸ ಮಾಡುವ ಲಾಜರನ ಸಹೋದರಿ ಮಾರ್ಥಳು ಅತಿಥಿಗಳ ಸೇವೆ ಮಾಡುತ್ತಿದ್ದಳು.

ಔತಣದ ಒಂದು ಸಮಯದಲ್ಲಿ, ಮರಿಯಳು ಯೇಸುವಿನ ಬಳಿಗೆ ಬಂದಳು. ಆಕೆ ಲಾಜರನ ಇಬ್ಬರು ಸಹೋದರಿಯರಲ್ಲಿ ಹೆಚ್ಚು ಭಾವನಾಪರಳೂ, ತನ್ನ ಸಹೋದರನ ಮರಣದ ನಂತರ ಬೇಥಾನ್ಯಕ್ಕೆ ಯೇಸುವು ಹಿಂದಿರುಗಿ ಬಂದಾಗ ಆತನ ಪಾದಗಳ ಮೇಲೆ ಬಿದ್ದು ಅತ್ತಂಥವಳೂ ಆಗಿದ್ದನ್ನು ನಾವು ಜ್ಞಾಪಿಸಿಕೊಳ್ಳುತ್ತೇವೆ. ಆಕೆಗೆ ಯೇಸುವು ಒಬ್ಬ ಒಳ್ಳೆಯ ಸ್ನೇಹಿತನು ಮತ್ತು ಒಬ್ಬ ಅದ್ಭುತಕರವಾದ ಬೋಧಕನೂ ಮತ್ತು ಆಶ್ಚರ್ಯಕರವಾದ ಸ್ವಸ್ಥಪಡಿಸುವಾತನೂ - ಆಕೆಯ ಆಳವಾದ ನೋವನ್ನು ಆಕೆಯ ಮಹಾನಂದಕ್ಕೆ ತಿರುಗಿಸುವಾತನೂ ಆಗಿದ್ದನು. ಆತನಿಗಾಗಿ ಆಕೆಯ ಭಾವನೆಗಳು ಆ ಸಾಯಂಕಾಲದ ಮಾತುಗಳಲ್ಲಿ ವಿವರಿಸಲಿಕ್ಕಾಗದಂಥವುಗಳಾಗಿದ್ದವು. ಆತನು ಬಹಳ ದೊಡ್ಡವನಾಗಿದ್ದನು, ಬಹಳ ಪರಿಶುದ್ಧನಾಗಿದ್ದನು ಮತ್ತು ಬಹಳ ಹತ್ತಿರದಲ್ಲಿದ್ದನು - ಮತ್ತು ಆತನು ಸಾಯುವುದಕ್ಕಾಗಿ ಯೆರೂಸಲೇಮಿಗೆ ಹೋಗಲಿಕ್ಕಿದ್ದನು. ತನ್ನ ಹೃದಯದಲ್ಲಿ ಈ ಎಲ್ಲಾ ಯೋಚನೆಗಳಿಂದ, ಮರಿಯಳು ರಕ್ಷಕನಿಗೆ ಅಭಿಷೇಕ ಮಾಡಿದಳು.

"ಆಗ ಮರಿಯಳು ಬಹು ಬೆಲೆಯುಳ್ಳ ಅಚ್ಚ ಜಟಾಮಾಂಸಿ ತೈಲವನ್ನು ಒಂದು ಸೇರಷ್ಟು

ತಂದು ಯೇಸುವಿನ ಪಾದಕ್ಕೆ ಹಚ್ಚಿ ತನ್ನ ತಲೇ ಕೂದಲಿನಿಂದ ಆತನ ಪಾದಗಳನ್ನು ಒರಸಿದರು; ಆ ತೈಲದ ಪರಿಮಳವು ಮನೆಯಲೆಲ್ಲಾ ತುಂಬಿಕೊಂಡಿತು" (12:3). ಎಂದು ಯೋಹಾನನು ದಾಖಲೆ ಮಾಡಿದ್ದಾನೆ. ಜಟಾಮಾಂಸಿ ತೈಲವು ಬಹು ಬೆಲೆಯುಳ್ಳ ಸುವಾ ಸನೆಯ ತೈಲವಾಗಿದ್ದು, ಉತ್ತರ ಭಾರತದಿಂದ ಆಮದು ಮಾಡಿಕೊಳ್ಳಲ್ಪಡುತಿತ್ತು. ಹೆಚ್ಚಾಗಿ ಅದು ಅಮೃತ ಶಿಲೆಯಿಂದ ಮಾಡಿದ ಭರಣಿಯಲ್ಲಿ (ಶೀಸೆಯಲ್ಲಿ) ಸೀಲ್ ಮಾಡಿಇಡಲ್ಪಡುತ್ತಿತ್ತು. ತೈಲವನ್ನು ತಗೆಯಬೇಕಾದರೆ ಶೀಸಿಯ ಕುತ್ತಿಗೆಯ ಭಾಗವು ಒಡೆಯಲ್ಪಡಬೇಕಾಗುತ್ತಿತ್ತು. ಹೀಗೆ ಶೀಸೆಯಲ್ಲಿದ್ದ ಎಲ್ಲಾ ಎಣ್ಣೆಯನ್ನು ಒಂದೇ ಸಲಕ್ಕೆ ತೀರಿಸಬೇಕಾಗುತಿತ್ತು ಯೇಸುವಿನ ಪಾದದ ಮೇಲೆ ಮರಿಯಳು ಸುರಿದ ತೈಲವು ಒಂದು ಸೇರಿನಷ್ಟು (ಹನ್ನೆರಡು ಔನ್ಸ) ಇತ್ತೆಂದು ಯೋಹಾನನು ದಾಖಲೆ ಮಾಡಿದ್ದಾಳೆ. ಸಾಮಾನ್ಯವಾಗಿ, ಅದು ವಿಶೇಷ ಸಂದರ್ಭಗಳಲ್ಲಿ ಹಲವಾರು ಜನ ಅತಿಥಿಗಳ ತಲೆಗಳ ಮೇಲೆ ಸುರಿಯಲ್ಪಡುತ್ತಿತ್ತು. ಅದರ ಬದಲು ಮರಿಯಳು ಎಲ್ಲವನ್ನು ಯೇಸುವಿನ ಪಾದಗಳ ಮೇಲೆ ಸುರಿದು ತನ್ನ ತಲೆಗೂದಲುಗಳಿಂದ ಆತನ ಪಾದವನ್ನು ಒರೆ ಸಿದಳು. ಯೇಸುವಿಗೆ, "ನಾನು ನಿನ್ನನ್ನು ಪ್ರಿತಿಸುತ್ತೇನೆ" ಎಂದು ಹೇಳಲು ಅತ್ಯಾಸಕ್ತಿಯಿಂದ ಬಯಸುತ್ತಿದ್ದ ಒಬ್ಬ ವ್ಯಕ್ತಿಯ ಒಂದು ಸುಂದರವಾದ ಕಾಣಿಕೆಯಾಗಿದೆ.

ಮರಿಯಳ ಕಾಣಿಕೆಯ ಹಲವಾರು ಗುಣಲಕ್ಷಣಗಳು ಅದನ್ನು ವಿಶೇಷವಾದದ್ದನ್ನಾಗಿ ಮಾಡಿದವು. ಮೊದಲನೆಯದಾಗಿ, ಅದು ಅತೀಯಾದ ಬೆಲೆಯುಳ್ಳದ್ದಾಗಿತ್ತು. ಯೂದನು ಆಕೆಯ ಕೃತ್ಯಗಳನ್ನು ವಿರೋಧಿಸಿದನು. ಸುಗಂಧ ತೈಲವು ಒಬ್ಬ ವಿಶೇಷ ಕೂಲಿಕಾರನ ಒಂದು ವರ್ಷದ ಸಂಬಳದ ಮೊತ್ತಕ್ಕೆ ಮಾರಾಟ ಮಾಡಬಹುದಿತ್ತು (12:4, 5). ಒಂದು ಸಮಯದಿಂದ ಇನ್ನೊಂದು ಸಮಯಕ್ಕೆ ಒಂದು ಸಂಸ್ಕೃತಿಯಿಂದ ಇನ್ನೊಂದು ಸಂಸ್ಕೃತಿಗೆ ಹಣ ಲೆಕ್ಕಚಾರವು ಭಿನ್ನವಾದರೂ, ಒಂದು ವರ್ಷದ ಸಂಬಳದ ಮಹತ್ವವನ್ನು ನೀವು ಕಂಡು ಕೊಳ್ಳಬಹುದು! ಯೂದನಿಗಿದ್ದಂಥ ತಣ್ಣಗಾದ ಹೃದಯಕ್ಕೆ ಧಾರಳವಾದ ಕಾಣಿಕೆಯು ಅರ್ಥಕೊಡುವದಿಲ್ಲ.

ಎರಡನೆಯದಾಗಿ, ಮರಿಯಳ ಕಾಣಿಕೆಯು, ತನ್ನ ಬಗ್ಗೆ ಯೋಚನೆಯಿಲ್ಲದೇ ಕೊಡಲ್ಪಟ್ಟಿತು. ಕೆಲವು ಸಲ, ನಾವು ಕಾಣಿಕೆಗಳನ್ನು ಕೊಡುವಂತೆ, ಕಾಣಿಕೆಯನ್ನು ಸ್ವೀಕರಿಸಿಕೊಳ್ಳು ವವರಿಗಿಂತ ಹೆಚ್ಚಾಗಿ ನಮ್ಮ ಬಗ್ಗೆ ಯೋಚಿಸುತ್ತಿರುತ್ತೇವೆ "ಅದು ಸಾಕಾಷ್ಟಾಗಿರುವುದೋ?"; "ಅವರು ಅದನ್ನು ಮೆಚ್ಚಿಕೊಳ್ಳುವರೋ?"; "ಅವರು ನನ್ನ ಬಗ್ಗೆ ಏನನ್ನು ಯೋಚಿಸು ವರೋ?" ಹೀಗಿದ್ದರೂ, ಮರಿಯಳ ಬಗ್ಗೆ ಪ್ರತಿಯೊಂದು ಈ ಪ್ರಶ್ನೆಗಳಲ್ಲಿ ಯಾವುದೂ ಆಕೆಯ ಮನಸ್ಸಿನಲ್ಲಿ ಇರಲಿಲ್ಲವೆಂಬುದನ್ನು ಸೂಚಿಸುತ್ತದೆ. ಆಕೆ ಯೇಸುವಿನೊಂದಿಗೆ ಮಾತ್ರವೇ ಮತ್ತು "ಬೋಧಕನಿಗಾಗಿ" ತನ್ನ ಪ್ರೀತಿಯು ಎಷ್ಟು ದೊಡ್ಡದಾಗಿದೆ ಎಂಬುದನ್ನು ತೋರಿಸುವದರಲ್ಲಿ ಸಂಬಂಧಿಸಿತ್ತು. ತನ್ನ ತಲೇ ಕೂದಲುಗಳಿಂದ ಒರಸಿದ್ದು ಮರಿಯಳು ತನ್ನ ಎಷ್ಟು ಅಲ್ಪವಾಗಿ ಯೋಚಿಸುತ್ತಿದ್ದಳು ಎಂಬುದನ್ನು ಸೂಚಿಸುತ್ತದೆ. ಆ ಕಾಲದ ಸ್ತ್ರೀಯರು ಆ ರೀತಿಯಲ್ಲಿ ಮಾಡುತ್ತಿರಲಿಲ್ಲ, ಆದರೆ ಮರಿಯಳು ಮನೋಭಾವನೆಯು "ಯಾರು ಏನು ಮಾಡುವರು?" ಯೇಸುವೇ ಎಲ್ಲಕ್ಕಿಂತ ಪ್ರಾಮುಖ್ಯನಾಗಿದ್ದಾನೆ ಎಂಬಂತೆ ಇತ್ತು.

ಮೂರನೆಯದಾಗಿ, ಮರಿಯ ಕಾಣಿಕೆಯು ದೀನತೆಯಲ್ಲಿ ಸುತ್ತಲ್ಪಟ್ಟಿತ್ತು. ಆಕೆ ಯೇಸುವಿನ ತಲೆಯ ಮೇಲೆ ಅಭಿಷೇಕಿಸಲಿಲ್ಲ, ಆದರೆ ಆತನ ಪಾದಗಳನ್ನು ಅಭಿಷೇಕಿಸಿದಳು. ಆತನ ಪಾದಗಳನ್ನು ಒರಸಲು ಕೈಪಾವುಡವನ್ನು ಆಕೆ ಉಪಯೋಗಿಸಲಿಲ್ಲ, ಅದರ ಬದಲು ಆಕೆ ತನ್ನ ತಲೆಗೂದಲುಗಳನ್ನು ಉಪಯೋಗಿಸಿದಳು. ಗರ್ವವು, ಮರಿಯಳಿಗೆ ಒಂದು ಚರ್ಚಾಸ್ಪದ ವಿಷಯವಾಗಿರಲಿಲ್ಲ. ಯೇಸುವಿಗಾಗಿ ಪ್ರೀತಿಯನ್ನು ವ್ಯಕ್ತಪಡಿಸುವುದೇ ಆಕೆಯ ಧ್ಯೆಯ ವಾಗಿತ್ತು

ಅಂತಿಮವಾಗಿ, ಮರಿಯಳ ಕಾಣಿಕೆಯು ಆಕೆಯ ಹೃದಯವಾಗಿತ್ತು ಆದರೆ ಹನ್ನೆರಡು ಔನ್ಸ ತೈಲವಾಗಿರಲಿಲ್ಲ. ಕೆಲವು ಸಲ ನಾವು ಪ್ರೀತಿಸುವಂಥವರಿಗೆ ಹೂವುಗಳನ್ನೂ,

ಉಂಗುರಗಳನ್ನು ಬಟ್ಟೆಗಳನ್ನೂ ಇಲ್ಲವೇ ಹಣವನ್ನೂ ಕೊಡುತ್ತವೆ. ಪ್ರತಿಯೊಂದು ಸಂಗತಿಯಲ್ಲಿ, ನಾವು ಕೊಡುವ ವಸ್ತುವು ಕಾಣಿಕೆಗಿಂತ ಇನ್ನೂ ಹೆಚ್ಚಾಗಿರುವದನ್ನು ಸಾಂಕೇತಿಸುತ್ತದೆ; ನಾವು ವ್ಯಕ್ತಪಡಿಸಲು ಪ್ರಯತ್ನಿಸುತ್ತಿರುವ ಪ್ರೀತಿಗಾಗಿ ಅದು ನಿಂತು ಕೊಳ್ಳುತ್ತದೆ; ಇದು ಮರಿಯಳ ಸುಗಂಧ ದ್ರವ್ಯದೊಂದಿಗೂ ಸಂಬಂಧಿಸಿತು. ಸುಗಂಧ ದ್ರವ್ಯವು ಯೇಸುವಿಗೂ ಮತ್ತು ಪ್ರತಿಯೊಬ್ಬರಿಗೂ ತಾನು ನಜರೇತಿನ ವಿಶೇಷ ಸ್ನೇಹಿತನನ್ನು ಪ್ರೀತಿಸಿದ್ದೇನೆಂದು ಹೇಳುವ ಸುವಾಸನೆಯ ಮಾರ್ಗವಾಗಿತ್ತು.

## ನಮ್ಮ ಕಾಣಿಕೆ

ಮರಿಯಳ ಕಾಣಿಕೆಯಂಥ ಕಾಣಿಕೆಯನ್ನು ಇಂದು ನಾವು ಹೇಗೆ ಕೊಡಬಹುದು? "ನಾನು ನಿನ್ನನ್ನು ಪ್ರೀತಿಸುತ್ತೇನೆ" ಎಂದು ದೇವರಿಗೆ ನಾವು ಹೇಗೆ ಹೇಳುವೆವು? ಅಂಥ ಸಂಬಂಧಕ್ಕಾಗಿ ಯಾವ ಕಾಣಿಕೆಯು ಯೋಗ್ಯವಾಗಿರುವುದು? ಪರಿಶುದ್ಧ ಬರಹಗಳು ಅದ್ಭು ತಕರವಾದ ಕಾಣಿಕೆಯು ವಿಚಾರದಿಂದ ತುಂಬಿರುವುದು!

ಪ್ರಾರಂಭಿಸುವದರೊಂದಿಗೆ, ನಾವು ನಮ್ಮ ಹೃದಯಗಳನ್ನು ಆತನಿಗೆ ಕೊಡಬಹುದು. ಎಲ್ಲಕ್ಕಿಂತ ಹೆಚ್ಚಾಗಿ, ಯೇಸುವಿನ ಪ್ರಕಾರವಾಗಿ ಅತಿದೊಡ್ಡ ಆಜ್ಞೆಯು, "ನಿನ್ನ ದೇವರಾಗಿರುವ ಕರ್ತನನ್ನು ನಿನ್ನ ಪೂರ್ಣ ಹೃದಯದಿಂದಲೂ ನಿನ್ನ ಪೂರ್ಣಪ್ರಾಣದಿಂದಲೂ ನಿನ್ನ ಪೂರ್ಣ ಬುದ್ಧಿಯಿಂದಲೂ ಪ್ರೀತಿಸಬೇಕು" ಎಂಬುದಾಗದೆ (ಮತ್ತಾಯ 22:37). ರೊಬರ್ಟಸನ್ ಮಕ್‌ಸ್ಟಿಲ್ಕೆನ್ ಅವರು ಒಬ್ಬ ಬೈಬಲ್ ಬೋಧಕರು. ಅವರ ಹೆಂಡತಿಯು ಅಲ್ಜೈಮರ ರೋಗದಿಂದ ಶ್ರಮೆಪಟ್ಟಳು. ಅವರ ನಿಜ - ಜೀವನದ ಅನುಭವವು ದೇವರಿಗೆ ನಮ್ಮ ಹೃದಯ ಗಳನ್ನು ಕೊಡುವದೆಂದರೆ ಏನು ಅರ್ಥ ಎಂಬುದರ ಕಡೆಗೆ ತೋರಿಸುತ್ತದೆ. ಮಕ್‌ಕ್ವಿಲ್ಕೆನ್ ಹೀಗೆ ಬರೆದನು,

> ನಾನು ಅನುದಿನವೂ ಆಫೀಸಿಗೆ ಹೋಗಲಿಕ್ಕಾಗುವಂತೆ ಒಬ್ಬ ಜೊತೆಗಾರನು ನಮ್ಮ ಮನೆಯಲ್ಲಿರುವಂತೆ ಸೆಮಿನರಿ ಬೋರ್ಡ್ ವ್ಯವಸ್ಥೆ ಮಾಡಿತು. ಈ ಎರಡು ವರ್ಷಗಳಲ್ಲಿ ಮರಿಯಳನ್ನು ಮನೆಯಲ್ಲಿಡುವುದು ಹೆಚ್ಚೆಚ್ಚಾಗಿ ಕಠಿಣವಾಗುತ್ತಲಿದೆ. ನಾನು ಹೊರಟ ಕೂಡಲೇ, ಆಕೆ ನನ್ನನ್ನು ಹಿಂಬಾಲಿಸಿ ಬರುವಳು. ನನ್ನೊಂದಿಗೆ ಆಕೆ ತೃಪ್ತಿಯಿಂದ ಇರುವಳು; ನಾನಿಲ್ಲದಿದ್ದರೆ ವ್ಯಥೆಗೊಳಗಾಗುತ್ತಿದ್ದಳು, ಕೆಲವು ಸಲ ಭಯದಿಂದ ಪೀಡಿತಳಾಗುತ್ತಿದ್ದಳು. ಶಾಲೆಗೆ ಹೋಗಿ ಬರಬೇಕೆಂದು ಒಂದು ಮೈಲು ನಡೆಯಬೇಕು. ಆಕೆ ಒಂದು ದಿನದಲ್ಲಿ ಹಾಗೆ ಹತ್ತು ಸಲ ಹೋಗಿ ಬರುತ್ತಿದ್ದಳು.
>
> ಕೆಲವು ಸಲ ರಾತ್ರಿಯಲ್ಲಿ ಆಕೆಯ ಬಟ್ಟೆಗಳನ್ನು ಬದಲಾಯಿಸುವಾಗ, ಆಕೆಯ ರಕ್ತಸಿಕ್ತ ಪಾದಗಳನ್ನು ಕಂಡುಕೊಳ್ಳುತ್ತಿದ್ದೆನು. ನಮ್ಮ ಕುಟುಂಬ ವೈದ್ಯರಿಗೆ ಹೇಳಿದಾಗ ಅವರು ಆಶ್ಚರ್ಯಪಟ್ಟರು. "ಅಂಥ ಪ್ರೀತಿ" ಎಂದು ಸರಳವಾಗಿ ಹೇಳಿದರು. ಆಗ ಕ್ಷಣಕಾಲದ ನಂತರ, "ವರ್ಷಗಳಲ್ಲಿ ಬೆಳವಣಿಗೆಯಾದ ಗುಣಲಕ್ಷಣಗಳು ಇಂಥ ಸಮಯಗಳಲ್ಲಿ ಹೊರಗೆ ಬರುವವು ಎಂಬ ಸಿದ್ಧಾಂತವಿರುವುದು" ಎಂದು ಹೇಳಿದರು. ಆ ರೀತಿಯಲ್ಲಿ ನಾನು ದೇವರನ್ನು ಪ್ರೀತಿಸಿದೆನೆಂದು ಬಯಸುತ್ತೇನೆ - ಎಲ್ಲಾ ಸಮಯಗಳಲ್ಲಿ ಆತನ ಸಮೀಪದಲ್ಲಿ ಇರುವದಕ್ಕೆ ಅತ್ಯಾಶೆಯಿಂದಿರುವುದು.[2]

ದೇವರಿಗೆ, "ನಾನು ನಿನ್ನನ್ನು ಪ್ರೀತಿಸುತ್ತೇನೆ" ಎಂದು ಹೇಳಲಿಕ್ಕೆ ಅತೀ ಸ್ಪಷ್ಟವಾದ ಮಾರ್ಗಗಳಲ್ಲಿ ಒಂದು, ಆತನಿಗೆ ಹೇಳುವುದಾಗಿದೆ. ನಾವು ಇದನ್ನು ಪ್ರತ್ಯೇಕ ಪ್ರಾರ್ಥನೆಯಲ್ಲಿ ಮತ್ತು ಆರಾಧನೆಯಲ್ಲಿ ನಾವು ಒಂದಾಗಿ ಬರುವಾಗ ಇದನ್ನು ಮಾಡುತ್ತೇವೆ. ಇದನ್ನು ಕರ್ತನಿಗೆ ಹೇಗೆ ವ್ಯಕ್ತಪಡಿಸಬೇಕೆಂದು ಕೀರ್ತನೆಗಳು ನಮಗೆ ಬೋಧಿಸುತ್ತವೆ. ನಾವು ಕೀರ್ತನೆಗಾರನನ್ನು ಅನುಕರಿಸುತ್ತೇವೆ: "ನನ್ನ ದೇವರೇ, ಒಡೆಯನೇ, ನಿನ್ನನ್ನು ಘನಪಡಿಸು

ತ್ತೇನೆ; ನಿನ್ನ ನಾಮವನ್ನು ಯುಗ ಯುಗಾಂತರಗಳಲ್ಲಿಯೂ ಕೊಂಡಾಡುವೆನು. ದಿನಂಪ್ರತಿ ನಿನ್ನನ್ನು ಕೀರ್ತಿಸುವೆನು; ನಿನ್ನ ನಾಮವನ್ನು ಯುಗಯುಗಾಂತರಗಳಲ್ಲಿಯೂ ಸ್ತುತಿಸುವೆನು" (ಕೀರ್ತನೆ 145:1, 2).

ಯುನೈಟೆಡ್ ಸ್ಟೇಟ್ಸ್, ಆಪರೇಶನ್ ಡೆಜರ್ಟ್ ಸ್ಟೋರ್ಮದ ಅವಧಿಯಲ್ಲಿ ಇರಾಕಿನ ವಿರುದ್ಧ ಯುದ್ಧಕ್ಕೆ ಹೋದಾಗ, ಸ್ಕೂಟ್ ಸ್ಪೈಚ್ಚರ್ ಎಂಬ ಒಬ್ಬ ಯುವಕ ವಿಮಾನ ಚಾಲಕನು ಹೋರಾಟದಲ್ಲಿ ಕೊಲ್ಲಲ್ಪಟ್ಟನು. ಅವನಿಗೆ ಒಬ್ಬ ಹೆಂಡತಿ ಮತ್ತು ಇಬ್ಬರು ಚಿಕ್ಕಮಕ್ಕಳಿದ್ದರು. ಅವನ ಮರಣದ ನಂತರ ಕೆಲವು ವಾರಗಳಾದ ತರುವಾಯ, ಅವನ ವೈಯಕ್ತಿಕ ವಸ್ತುಗಳು ಅವನ ಹೆಂಡತಿಗೆ ಹಿಂದಿರುಗಿಸಲ್ಪಟ್ಟವು. ಅವುಗಳಲ್ಲಿ ಅವನು ಸಾಯುವದಕ್ಕಿಂತ ಹಿಂದಿನ ದಿನದಂದು ಬರೆದ ಒಂದು ಪತ್ರವಿತ್ತು, ಅದನ್ನು ಅಂಚೆಗೆ ಹಾಕಲು ಸಮಯವಿದ್ದಿರಲಿಲ್ಲ. ಅದರಲ್ಲಿ ಅವನು ತನ್ನ ಮಕ್ಕಳಲ್ಲಿ ಪ್ರತಿಯೊಬ್ಬರಿಗೆ ಕೆಲವು ವಿಷಯವನ್ನು ಬರೆದಿದ್ದನು ಮತ್ತು ಈ ಕೆಳಗಿನ ಪಾಲುಗಳನ್ನು ತನ್ನ ಹೆಂಡತಿಗಾಗಿ ಬರೆದು ಪತ್ರ ಮುಗಿಸಿದ್ದನು: "ನೀನು ನನ್ನ ಜೀವನದ ಕೇಂದ್ರ ಬಿಂದುವಾಗಿರುವಿ, ನಾನು ನಿಮ್ಮೊಂದಿಗೆ ಪೂರ್ಣ ಸಂತೃಪ್ತಿಯಿಂದ ಜೀವಿಸಿದ್ದೇನೆ. ನಾನು ಒಂದು ವೇಳೆ ಹೊರಟು ಹೋದರೆ, ಪುಃನ ಪ್ರೀತಿಸುವದನ್ನು ಕಲಿತುಕೋ."[3] ಕೆಲವು ಸಲ ನಮ್ಮ ಪ್ರೀತಿಯ ಬಗ್ಗೆ ಮಾತಾಡುವುದು ಅತಿ ದೊಡ್ಡ ವರವಾಗಿರ ಬಹುದು!

ಇತರರನ್ನು ಪ್ರೀತಿಸುವುದು ದೇವರಿಗಾಗಿ ನಮ್ಮ ಪ್ರೀತಿಯನ್ನು ಪ್ರದರ್ಶಿಸುತ್ತದೆ. ನಾವು ನಮ್ಮನ್ನು ಪ್ರೀತಿಸಿಕೊಳ್ಳುವಂತೆ ನಮ್ಮ ನೆರೆಯವರನ್ನು ಪ್ರೀತಿಸುವುದು ಹಳೇ ಒಡಂಬಡಿಕೆಯಲ್ಲಿ ಪರಿಚಯಿಸಲ್ಪಟ್ಟ ವಿಚಾರವಾಗಿದೆ ಮತ್ತು ಎರಡನೆಯ ದೊಡ್ಡ ಆಜ್ಞೆಯಂತೆ ಯೇಸುವಿನಿಂದ ಹೇಳಲ್ಪಟ್ಟಿದೆ.[4] ತಮ್ಮ ಮಕ್ಕಳನ್ನು ಪ್ರೀತಿಸುವದರಿಂದ ಗಂಡನು ತನ್ನ ಪ್ರೀತಿಯನ್ನು ತನ್ನ ಹೆಂಡತಿಗೆ ತೋರಿಸುವಂತೆ, ನಮ್ಮ ಜೊತೆ ಮಾನವರನ್ನು ಪ್ರೀತಿಸುವದರಿಂದ ದೇವರಿಗಾಗಿ ನಮ್ಮ ಪ್ರೀತಿಯನ್ನು ತೋರಿಸುತ್ತೇವೆ. ಒಬ್ಬರನೊಬ್ಬರ ಪ್ರೀತಿಸುವದರಿಂದ "ನಾನು ನಿನ್ನನ್ನು ಪ್ರೀತಿಸುತ್ತೇನೆ" ಎಂದು ದೇವರಿಗೆ ನಾವು ಹೇಳುತ್ತೇವೆ.

ದೇವರ ಬಗ್ಗೆ ಇತರರಿಗೆ ಹೇಳುವದರಿಂದ ಆತನಿಗಾಗಿರುವ ನಮ್ಮ ಪ್ರೀತಿಯನ್ನು ವ್ಯಕ್ತಪಡಿಸಬಹುದೆಂದು ಪರಿಶುದ್ಧ ಬರಹಗಳು ಹೇಳುತ್ತವೆ. ಇದು "ಅರಿಕೆ" ಎಂದು ಕರೆಯಲ್ಪಟ್ಟಿದೆ. ಯೇಸುವು ಹೀಗೆ ಹೇಳಿದನು;

> ಹಾಗಾದರೆ ಯಾವನು ಮನುಷ್ಯರ ಮುಂದೆ ತಾನು ಯೇಸುವಿನವನೆಂದು ಒಪ್ಪಿಕೊಳ್ಳುವನೋ, ನಾನು ಸಹ ಅವನನ್ನು ನನ್ನವನೆಂದು ಪರಲೋಕದಲ್ಲಿರುವ ನನ್ನ ತಂದೆಯ ಮುಂದೆ ತಾನು ಯೇಸುವಿನವನಲ್ಲವೆಂದು ಹೇಳುವನೋ ಅವನನ್ನು ನಾನೂ ಸಹ ಪರಲೋಕದಲ್ಲಿರುವ ನನ್ನ ತಂದೆಯ ಮುಂದೆ ನನ್ನವನಲ್ಲವೆಂದು ಹೇಳುವೆನು (ಮತ್ತಾಯ 10:32, 33).

ದೇವರಿಗಾಗಿರುವ ನಮ್ಮ ಪ್ರೀತಿಯನ್ನು ಇತರರಿಗೆ ನಾವು ಹೇಳುವಾಗ, ದೇವರಿಗೆ, "ನಾನು ನಿನ್ನನ್ನು ಪ್ರೀತಿಸುತ್ತೇನೆ" ಎಂದು ಹೇಳುವ ಇನ್ನೊಂದು ರೀತಿಯಾಗಿರುತ್ತದೆ.

ಬಹುಶಃ ದೇವರಿಗೆ "ನಾನು ನಿನ್ನನ್ನು ಪ್ರೀತಿಸುತ್ತೇನೆ" ಎಂದು ಹೇಳುವ ಅತೀ ಕಠಿಣವಾದ ರೀತಿಯು - ನಾವು ನಿಜವಾಗಿಯೂ ಕರ್ತನನ್ನು ಪ್ರೀತಿಸಲು ಬಯಸಿದರೆ ನಾವು ತಪ್ಪಿಸಿಕೊಳ್ಳಲಾರದಂಥದ್ದು - ಸರಳವಾಗಿ ಆತನಿಗೆ ವಿಧೇಯರಾಗುವದಾಗಿದೆ. "ದೇವರ ಮೇಲಣ ಪ್ರೀತಿ ಏನಂದರೆ ಆತನ ಆಜ್ಞೆಗಳನ್ನು ಕೈಕೊಂಡು ನಡೆಯುವದೇ ಆತನ ಆಜ್ಞೆಗಳು ಭಾರವಾದವುಗಳಲ್ಲ" ಎಂದು ಯೋಹಾನನು ಬರೆದನು (1 ಯೋಹಾನ 5:3). ಕೆಲವು ಸಲ, ಜನರು ಇದನ್ನೆ ಕೇಳಲು ಬಯಸುವದಿಲ್ಲ, ಆದರೆ ಆತನಿಗೆ ಮೆಚ್ಚಿಕೆಯುಳ್ಳವರಾಗಿರಬೇಕಾದರೆ ನಾವು ಆತನಿಗೆ ವಿಧೇಯರಾಗಬೇಕು.

ವಿಧೇಯತೆಯ ಸ್ಪಷ್ಟವಾದ ಹಾಗೂ ವ್ಯಾವಹಾರಿಕವಾದ ಸ್ವಭಾವದೊಂದಿಗೆ ನಮ್ಮ

ತೊಂದರೆಯು ಒಬ್ಬ ಮನುಷ್ಯನ ಮತ್ತು ಅವನ ಹೆಂಡತಿಯ ಬಗೆಗಿನ ಈ ಕೆಳಗಿನ ಕಥೆಯಲ್ಲಿ ಕಂಡು ಬರುತ್ತದೆ. ಆ ಮನುಷ್ಯನು ಕಠಿಣವಾದ ಅಸ್ವಸ್ಥತೆಯಲ್ಲಿದ್ದನು, ಆದುದರಿಂದ ಒಂದು ದಿನ ಅವನ ಹೆಂಡತಿಯು ತನ್ನ ಗಂಡನ ಸ್ಥಿತಿಯ ಬಗ್ಗೆ ಕೇಳಲು ವೈದ್ಯರ ಬಳಿಗೆ ಹೋದಳು. ಪ್ರತ್ಯೇಕವಾಗಿ ಅವರು ಮಾತಾಡಿದಾಗ, ವೈದ್ಯರು ಆ ಸ್ತ್ರೀಗೆ ಹೀಗೆ ಹೇಳಿದರು: "ನಿನ್ನ ಗಂಡನು ಪ್ರತೀ ದಿನ ಮೂರು ಆರೋಗ್ಯಕರವಾದ, ಮನೆಯಲ್ಲಿ - ಸಿದ್ಧಪಡಿಸಿದ ಊಟಗಳನ್ನು ಪಡೆದುಕೊಳ್ಳಲು ಪ್ರಾರಂಭಿಸದಿದ್ದರೆ - ಅವನು ಸತ್ತು ಹೋಗಲಿಕ್ಕಿದ್ದಾನೆ. ಇದಲ್ಲದೆ, ಅವನ ಜೀವನದಲ್ಲಿ ಒತ್ತಡವನ್ನು ಕಡಿಮೆ ಮಾಡಲು, ನೀನು ಯಾವಾಗಲೂ ಉಲ್ಲಾಸದಿಂದಲೂ ದಯೆಯಿಂದಲೂ ಇರುವ ಅಗತ್ಯತೆ ಅವನಿಗಿದೆ ಅಂತಿಮವಾಗಿ ರೋಗಾಣುಗಳಿಗೆ ಅವನ ಪ್ರತಿಕ್ರಿಯೆ ಕಡಿಮೆಯಾಗಿದ್ದುದರಿಂದ, ಮನೆಯು ಯಾವಾಗಲೂ ಅಚ್ಚುಕಟ್ಟಾಗಿಯೂ ಸ್ವಚ್ಛ ವಾಗಿಯೂ ಇರುವ ಅಗತ್ಯತೆ ಅವನಿಗಿದೆ." ಆ ಸ್ತ್ರೀಯು ತನ್ನ ಗಂಡನ ಬಳಿಗೆ ಹಿಂದಿರುಗಿ ಬಂದಾಗ ವೈದ್ಯರು ಏನು ಹೇಳಿದ್ದಾರೆ ಎಂಬುದರ ಬಗ್ಗೆ ಅವನು ಆಸಕ್ತನಾಗಿದ್ದನು. "ನೀನು ಸಾಯಲಿಕ್ಕಿದ್ದೀ ಎಂದು ಅವನು ಹೇಳಿದನು" ಎಂದು ಹೆಂಡತಿ ವರದಿ ಮಾಡಿದಳು. ದೇವರಿಗಾಗಿ ಪ್ರೀತಿಯು ನಾವು ದೇವರನ್ನು ಪ್ರೀತಿಸುತ್ತೇವೆ ಎಂದು ಹೇಳುವದಕ್ಕಿಂತ ಹೆಚ್ಚಾದದ್ದಾಗಿದೆ; ತಂದೆ ತಾಯಿಗಳನ್ನು, ಜೊತೆಗಾರರನ್ನು, ಇಲ್ಲವೇ ಮಕ್ಕಳನ್ನು ಪ್ರೀತಿಸುವುದು ಕೇವಲ ಪ್ರೀತಿಯ ಮಾತುಗಳನ್ನು ಹೇಳುವದಕ್ಕಿಂತ ಹೆಚ್ಚಾದದ್ದು ಒಳಗೊಂಡಿರುವಂತೆ ಅದು ಆತನಿಗೆ ವಿಧೇಯ ವಾಗುವದನ್ನು ಒಳಗೊಂಡಿರುತ್ತದೆ.

"ನಾನು ನಿನ್ನನ್ನು ಪ್ರೀತಿಸುತ್ತೇನೆ" ಎಂದು ದೇವರಿಗೆ ನಾವು ಹೇಳುವ ಕೆಲವೇ ಮಾರ್ಗಗಳು ಇವಾಗಿರುತ್ತವೆ. "ನಾನು ನಿನ್ನನ್ನು ಪ್ರೀತಿಸುತ್ತೇನೆ" ಎಂದು ನಮಗೆ ಹೇಗೆ ದೇವರು ಹೇಳುತ್ತಾನೆ ಎಂಬುದನ್ನು ನೀನು ತಿಳಿದಿರುವಿಯೋ?

## ದೇವರ ಕಾಣಿಕೆ

ಮರಿಯಳು ಯೇಸುವನ್ನು ಅಭಿಷೇಕಿಸಿದ ನಂತರ ಮತ್ತು ಆತನು ಔತಣವನ್ನು ಮುಗಿಸಿದ ನಂತರ, ಯೇಸುವು ಯೆರೂಸಲೇಮಿನ ಕಡೆಗೆ ಹೊರಟನು. ತಾನು ಎಲ್ಲಿಗೆ ಹೋಗು ತ್ತಿದ್ದೇನೆ ಮತ್ತು ತಾನು ಏನು ಮಾಡುತ್ತಿದ್ದೇನೆ ಎಂಬುದನ್ನು ಆತನು ತಿಳಿದಿದ್ದನು. ಇದು ತನ್ನ ಅಂತಿಮ ಪ್ರಯಾಣವಾಗಿದೆ ಮತ್ತು ಯೆಹೂದಿ ಅರಿತು ಕೊಂಡಿದ್ದನು. ಆತನ ಮರಣವು ಒಂದು ಆಕಸ್ಮಿಕವಾಗಿರುವದಿಲ್ಲ. ಈ ಮೊದಲು ಆತನು ಹೀಗೆ ಹೇಳಿದ್ದನು;

> ನಾನು ತಿರಿಗಿ ಪಡಕೊಳ್ಳುತ್ತೇನೆಂದು ನನ್ನ ಪ್ರಾಣವನ್ನು ಕೊಡುತ್ತೇನೆ; ಅದರ ನಿಮಿತ್ತ ವಾಗಿ ತಂದೆಯು ನನ್ನನ್ನು ಪ್ರೀತಿಸುತ್ತಾನೆ. ನನ್ನ ಪ್ರಾಣವನ್ನು ಯಾರೂ ನನ್ನಿಂದ ತೆಗೆಯರು. ನನ್ನಷ್ಟಕ್ಕೆ ನಾನೇ, ಅದನ್ನು ಕೊಡುತ್ತೇನೆ. ಅದನ್ನು ಕೊಡುವದಕ್ಕೆ ನನಗೆ ಅಧಿಕಾರ ಉಂಟು, ಅದನ್ನು ತಿರಿಗಿ ಪಡಕೊಳ್ಳುವದಕ್ಕೆ ನನಗೆ ಅಧಿಕಾರ ಉಂಟು. ಈ ಅಪ್ಪಣೆಯನ್ನು ನನ್ನ ತಂದೆಯಿಂದ ಹೊಂದಿದ್ದೇನೆ (ಯೋಹಾನ 10:17, 18).

ಸ್ವಯಿಚ್ಛೆಯಿಂದ, ಯೇಸುವು ನಾವೆಂದೂ ಸ್ವೀಕರಿಸದೇ ಇದ್ದ ಅತೀದೊಡ್ಡ ಕಾಣಿಕೆಯನ್ನು ಜಗತ್ತಿಗೆ ಕೊಡಲು ಬೇಥಾನ್ಯವನ್ನು ಬಿಟ್ಟು ಹೊರಟನು! ಕೆಲವೇ ಅಲ್ಪ ದಿನಗಳಲ್ಲಿ, ಯೇಸುವು ಜಗತ್ತಿನ ಪಾಪಗಳಿಂದ ಶಿಲುಬೆಯ ಮೇಲೆ ಸಾಯುವನು. ಯೇಸುವಿಗೆ ಮರಿಯಳ ಕಾಣಿಕೆಯು ಅದ್ಭುತಕರವಾದದ್ದಾಗಿರುವಂಥದ್ದು, ಶಿಲುಬೆಯ ಮೇಲೆ ತನ್ನ ಪ್ರಾಣವನ್ನು ಕೊಡುವದರ ವಿಪುಲತೆಗೆ ಹೋಲಿಕೆಯಲ್ಲಿ ಅದು ಕಳೆಗುಂದುವುದು!

## ಮುಕ್ತಾಯ

ಆತನ ಮರಣದ ನಂತರ, ಯೇಸುವಿನ ದೇಹವು ಒಂದು ಸಮಾಧಿಯಲ್ಲಿ ಇಡಲ್ಪಟ್ಟಿತು, ಅದರಿಂದ ಮೂರು ದಿನಗಳ ನಂತರ ಆತನು ಎದ್ದನು. ದೇವರು ಯೇಸುವನ್ನು, "ನಮ್ಮ ಅಪರಾಧಗಳ ನಿಮಿತ್ತ ಮರಣಕ್ಕೆ ಒಪ್ಪಿಸಿ ಕೊಟ್ಟು ನಮಗೆ ನೀತಿವಂತರೆಂಬ ನಿರ್ಣಯವು ಉಂಟಾಗುವ ನಿಮಿತ್ತ ಜೀವದಿಂದ ಎಬ್ಬಿಸಿದನು" (ರೋಮಾಪುರ 4:25) ಎಂದು ಪೌಲನು ಬರೆದಾಗ, ಅವನು ಈ ಘಟನೆಗಳ ಮಹತ್ವವನ್ನು ಸರಾಂಶಗೊಳಿಸಿನು. ಅನೇಕ ವಿಧಗಳಲ್ಲಿ - ಆದರೆ ವಿಶೇಷವಾಗಿ ಯೇಸುವಿನ ಮರಣ, ಹೂಣಿಡುವಿಕೆ ಮತ್ತು ಪುನರುತ್ಥಾನದಲ್ಲಿ - ನಮ್ಮಲ್ಲಿ ಪ್ರತಿಯೊಬ್ಬರಿಗೆ ದೇವರು, "ನಾನು ನಿನ್ನನ್ನು ಪ್ರೀತಿಸುತ್ತೇನೆ" ಎಂದು ಹೇಳುತ್ತಾನೆ. ಯೋಹಾನನು, ಹೀಗೆ ಹೇಳಿದಂತೆ, ಯೋಹನನ ಸುವಾರ್ತೆಯು ಈ ಮೊದಲು ಈ ಸಂಬಂಧವನ್ನು ಮಾಡಿತು. "ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು; ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು" (ಯೋಹಾನ 3:16).

ನೀನು ದೇವರನ್ನು ಪ್ರೀತಿಸುವಿಯೋ? ಹಾಗಿದ್ದರೆ, ಆ ಪ್ರೀತಿಯನ್ನು ಈಗಲೇ ಹೇಗೆ ತಿಳಿಸುತ್ತಿರುವಿ? ಪಾಪದಿಂದ ತಿರುಗಿಕೊಂಡು, ಕ್ರಿಸ್ತನಲ್ಲಿ ಬಾಪ್ತಿಸ್ಮ ಹೊಂದುವದರಿಂದ ನೀನು ಪ್ರೀತಿಯನ್ನು ವ್ಯಕ್ತಪಡಿಸುವ ಅಗತ್ಯತೆ ನಿನಗಿದೆ (ಅಪೊಸ್ತಲರ ಕೃತ್ಯಗಳು 2:38). ನೀನು ಒಂದು ಸಲ ಆಯ್ದುಕೊಂಡು, ಆದರೆ ಈಗ ನೀನು ಬಿದ್ದು ಹೋಗಿರುವ ನಂಬಿಕೆಗೆ ಹಿಂದಿರುಗುವದರಿಂದ ನೀನು ನಿನ್ನ ಪ್ರೀತಿಯನ್ನು ವ್ಯಕ್ತಪಡಿಸುವ ಅಗತ್ಯತೆ ಇರುವುದು ದೇವರಿಗೆ, "ನಾನು ನಿನ್ನನ್ನು ಪ್ರೀತಿಸುತ್ತೇನೆ" ಎಂದು ಸರಳವಾಗಿ ಹೇಳುವದರಿಂದ ನಿನ್ನ ಪ್ರೀತಿಯನ್ನು ವ್ಯಕ್ತಪಡಿಸಬಹುದು. ಮರಿಯಳು ಮಾರ್ಗತೋರಿಸುತ್ತಾಳೆ. ಇಂದು ಕರ್ತನಿಗೆ "ನಾನು ನಿನ್ನನ್ನು ಪ್ರೀತಿಸುತ್ತೇನೆ" ಎಂದು ಹೇಳುವಿಯೋ?

---

ಟಿಪ್ಪಣಿಗಳು

[1]ಮತ್ತಾಯ 26:6 ಮತ್ತು ಮಾರ್ಕ 14:3 ಈ ಘಟನೆಯನ್ನು ಕುಷ್ಠರೋಗಿಯಾದ ಸೀಮೋನನ ಮನೆಯಲ್ಲಿ ಇಡುತ್ತವೆ. [2]Robertson McQuilken, "Repaying a Four-Year Debt," *Leadership* (Summer 1993): 43. [3]Jerry D. Twentier, *The Positive Power of Praising People* (Nashville: Thomas Nelson Publishers, 1994), n.p. [4]ಯಾಜಕಕಾಂಡ 19:18; ಮತ್ತಾಯ 22:39.